ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) –

(ಅ) ಯೋಜನೆ ಪ್ರಾರಂಭವಾದಾಗಿನಿಂದ 2006–07 ನೇ ಸಾಲಿನವರೆಗೂ ಬೀಳಗಿ ಮತಕ್ಷೇತ್ರದಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ಒಟ್ಟು 30078 ರೈತರು ವಿಮೆ ಮಾಡಿಸಿರುತ್ತಾರೆ

(ಆ) ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಒಟ್ಟು ರೂ 221 60 ಲಕ್ಷಗಳ ಪರಿಹಾರವನ್ನು ನೀಡಲಾಗಿದೆ

(ಇ) ಇಲ್ಲ

(ಈ) ಉದ್ಭವಿಸುವುದಿಲ್ಲ

(ಉ) ಉದ್ಭವಿಸುವುದಿಲ್ಲ

737 (645) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ತೋಟಗಾರಿಕೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಮಳೆಗಾಲದ ಪ್ರಾರಂಭದಲ್ಲಿ ಅಡಿಕೆಗೆ ಕೊಳೆರೋಗ ಬರುವುದರಿಂದ ಮೂರು ನಾಲ್ಕು ಬಾರಿ ಮೈಲುತುತ್ತ ಸಿಂಪಡಿಸಬೇಕಾದ ಅಗತ್ಯವಿದ್ದು, ಸರ್ಕಾರ ಸಬ್ಸಿಡಿ ದರದಲ್ಲಿ ಮೈಲುತುತ್ತ ಒದಗಿಸಲಾಗುತ್ತಿದೆಯೇ ,

(ಆ) ರಾಷ್ಟ್ರೀಯ ತೋಟಗಾರಿಕಾ ಮಿಷನ್ ಯೋಜನೆಯಡಿ ಇದನ್ನು ಒದಗಿಸಲು ಸಬ್ಸಿಡಿ ನೀಡಲಾಗುತ್ತಿದೆಯೇ ,

(ಇ) ಅಡಿಕೆ ಬೆಳೆಸಲು ಈ ಜಿಲ್ಲೆಗಳಿಗೆ ಪ್ರಕೃತಿ ವಿಕೋಪ ಯೋಜನೆ ಇನ್ನು ಹೆಚ್ಚಿನ ಕೃಷಿಕರಿಗೆ ಸಬ್ಸಿಡಿ ದರದಲ್ಲಿ ಹೆಚ್ಚು ಮೈಲುತುತ್ತ ನೀಡಲು ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಶಶಿಕಾಂತ ಅ ನಾಯಿಕ (ತೋಟಗಾರಿಕೆ ಸಚಿವರು) –

(ಅ) ಹೌದು

(ಆ) ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಪ್ರಧಾನ ಮಂತ್ರಿಗಳ ವಿಶೇಷ ಪ್ಯಾಕೇಜ್‌ಗೆ ಒಳಪಡುವ ಜಿಲ್ಲೆಗಳ ಪೈಕಿ ಮಲೆನಾಡು ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಮೈಲುತುತ್ತವನ್ನು ಒದಗಿಸಲು ಪ್ರತಿ ಫಲಾನುಭವಿಗೆ ಗರಿಷ್ಠ 1000 ರೂ ವರೆಗೆ ಶೇ 50 ರ ಪ್ರಮಾಣದಲ್ಲಿ ಸಬ್ಸಿಡಿ ನೀಡಲಾಗುತ್ತಿದೆ

(ಇ) ಈ ಜಿಲ್ಲೆಗಳಿಗೆ ಪ್ರಕೃತಿ ವಿಕೋಪ ಯೋಜನೆಯಡಿ ಇನ್ನು ಹೆಚ್ಚಿನ ಕೃಷಿಕರಿಗೆ ಸಬ್ಸಿಡಿ ದರದಲ್ಲಿ ಹೆಚ್ಚು ಮೈಲುತುತ್ತ ನೀಡುವ ಕಾರ್ಯಕ್ರಮವಿರುವುದಿಲ್ಲ ಆದರೆ ತೋಟಗಾರಿಕೆ ಇಲಾಖೆಯ ಯೋಜನೆಗಳಾದ "ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಮತ್ತು ರೈತರಿಗೆ ಸಹಾಯ" ಯೋಜನೆಗಳಡಿ ಅಡಿಕೆಯು ಸೇರಿದಂತೆ ಎಲ್ಲಾ ತೋಟಗಾರಿಕಾ ಬೆಳೆಗಳ ಸಸ್ಯ ಸಂರಕ್ಷಣೆಗೆ ಶೇ 50% ರಷ್ಟು ಸಹಾಯ ಧನವನ್ನು ನೀಡಲಾಗುತ್ತಿದೆ

738 (646) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ಏಟ್ಲ) ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ –

(ಅ) ರಾಜ್ಯದಲ್ಲಿ ಈ ವರ್ಷದ ಆಯವ್ಯಯದಲ್ಲಿ ರೈತರ ಸಾಲ ಮನ್ನಾ ಮಾಡಿದ ನಂತರ ಕೃಷಿ ರೈತರಿಗೆ ಗ್ರಾಮೀಣ ಸಹಕಾರಿ ಬ್ಯಾಂಕುಗಳು ಹೊಸ ಸಾಲ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಡಿಸಿಸಿ ಬ್ಯಾಂಕ್ ಮುಖಾಂತರ ಗ್ರಾಮೀಣ ಸಹಕಾರಿ ಬ್ಯಾಂಕ್‌ಗಳು ಸಾಲ ನೀಡದೇ ಇರಲು ಕಾರಣಗಳೇನು ? ಸರ್ಕಾರ ಈ ಕುರಿತು ಡಿಸಿಸಿ ಬ್ಯಾಂಕ್‌ಗಳಿಗೆ ಏನಾದರೂ ಸೂಚನೆ ನೀಡಲಾಗಿದೆಯೇ ?

(ಇ) ಹೊಸ ಸಾಲ ನೀಡದೇ ಉದ್ಭವಿಸಿರುವ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದ್ದರೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು) –

(ಅ) ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳು ದಿನಾಂಕ 01–04–2007 ರಿಂದ 30–06–2007 ರವರೆಗೆ 3,53,838 ರೈತರಿಗೆ ಒಟ್ಟು 1099 04 ಕೋಟಿ ರೂ ಗಳ ಕೃಷಿ ಸಾಲಗಳನ್ನು ನೀಡಿರುತ್ತದೆ

(ಆ) ಎಲ್ಲಾ ಅರ್ಹ ರೈತರಿಗೆ ಕೃಷಿ ಸಾಲಗಳನ್ನು ನೀಡುವಂತೆ ಸೂಚಿಸಲಾಗಿರುತ್ತದೆ ಆದರೆ ಕೃಷಿ ಸಾಲ ನೀಡಿಕೆಯ ಪ್ರಮಾಣವು ಕೃಷಿ ಪತ್ತಿನ ಸಹಕಾರಿ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿ ಹಾಗೂ ಸಾಲ ಪಡೆಯುವ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ

(ಇ) ಸರ್ಕಾರವು ಸಾಲ ಮನ್ನಾ ಯೋಜನೆಯಡಿ ಇಲ್ಲಿಯವರೆಗೂ ರೂ 750–00 ಕೋಟಿಗಳನ್ನು ಬ್ಯಾಂಕುಗಳಿಗೆ ಭರಿಸಿಕೊಟ್ಟಿರುತ್ತದೆ ಎಲ್ಲಾ ಜಿಲ್ಲೆಗಳಿಂದ ದೃಢೀಕೃತ ಬಿಲ್ಲುಗಳು ಬಂದ ನಂತರ ಉಳಿದ ಹಣವನ್ನು ಭರಿಸಿಕೊಡಲು ಕ್ರಮ ಕೈಗೊಳ್ಳಲಾಗುವುದು